ಉ) ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯ ಒದಗಿಸಲು ಕ್ರಮ ಕಐಗೊಳ್ಳಲಾಗುತ್ತಿದೆ. ಹೆಚ್ಚುವರಿ ಅನುದಾನ ಲಭ್ಯವಿದ್ದಾಗ ಕ್ರಮಬದ್ಧವಾಗಿ ಉನ್ನತಶ್ರೇಣಿಗೆ ತರಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಕೈಗೊಂಡಿರುವ ಹಜ್ ಯಾತ್ರೆ ಕುರಿತು

4609 (5367) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ಸಾಲುಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಹಜ್ ಯಾತ್ರೆ ಕೈಗೊಂಡಿರುವವರ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ಕೊಡುವುದು)

ಆ) ಈ ರೀತಿ ಹಜ್ ಯಾತ್ರೆಗೆ ಆಗಿರುವ ವೆಚ್ಚ ಎಷ್ಟು? ಸರ್ಕಾರದ ಪಾಲು ಎಷ್ಟು?

ಇ) ಹಜ್ ಯಾತ್ರೆಯನ್ನು ಕಡಿಮೆ ಖರ್ಚಿನಲ್ಲಿ ಹಾಗೂ ಕಡಿಮೆ ಕಾಲಾವಕಾಶದಲ್ಲಿ ಕೈಗೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಈ) ಹಜ್‌ಯಾತ್ರೆ ಕೈಗೊಳ್ಳಲು ಸಾಧ್ಯವಾಗದ ಬಡಅಲ್ಪಸಂಖ್ಯಾತರು ಸಹಾ ಯಾತ್ರೆ ಕೈಗೊಳ್ಳುವಂತೆ ಮಾಡಲು ಸರ್ಕಾರ ಉದ್ದೇಶಿಸಿರುವ ಕ್ರಮ ಏನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 2001 : 341
2002 : 243
2003 : 168

ತಾಲ್ಲೂಕುವಾರು ವಿವರಗಳನ್ನು ಅನುಬಂಧ–Iರಲ್ಲಿ ನೀಡಲಾಗಿದೆ.

ಆ) ಹಜ್‌ಯಾತ್ರೆ ಕೈಗೊಳ್ಳಲು ಹಜ್ ಯಾತ್ರಿಕರೇ ಅವರ ಸ್ವತಃ ಖರ್ಚಿನಲ್ಲಿ ಭರಿಸಬೇಕಾಗುತ್ತದೆ. ಆದರೆ, ವಿಮಾನಯಾನ ಮಾಡಲು ಹಜ್ ಯಾತ್ರಿಕರಿಗೆ ಕೇಂದ್ರ ಸರ್ಕಾರವು ಸ್ವಲ್ಪಮಟ್ಟಿಗೆ ರಿಯಾಯಿತಿ ನೀಡುತ್ತಾರೆ. ರಾಜ್ಯ ಸರ್ಕಾರವು ಹೆಜ್‌ಯಾತ್ರಿಕರಿಗೆ ಯಾವುದೇ ಧನಸಹಾಯ ನೀಡುತ್ತಿಲ್ಲ. ಆದ್ದರಿಂದ ರಾಜ್ಯ ಸರ್ಕಾರದ ಪಾಲು ಏನೂ ಇರುವುದಿಲ್ಲ.

ಇ) ಹಜ್‌ಯಾತ್ರೆ ಕೈಗೊಳ್ಳಲು ತಗಲುವ ಖರ್ಚನ್ನು ಕೇಂದ್ರ ಹಜ್ ಸಮಿತಿ, ಮುಂಬೈ ರವರು ನಿಗದಿ ಪಡಿಸುತ್ತಾರೆ. ಹಾಗೂ ಕಾಲಾವಕಾಶದ ಬಗ್ಗೆ ಸೌದಿ ಅರೇಬಿಯಾ ಸರ್ಕಾರವು ನಿಗಧಿಪಡಿಸುತ್ತಾರೆ. ಆದ್ದರಿಂದ ರಾಜ್ಯ ಸರ್ಕಾರದ ಹಸ್ತಕ್ಷೇಪ ಈ ವಿಷಯದಲ್ಲಿ ಏನೂ ಇರುವುದಿಲ್ಲ.

ಈ) ಇಲ್ಲ. ಇಸ್ಲಾಮ ಧರ್ಮದ 5 ಮೂಲಭೂತ ತತ್ವಗಳಲ್ಲಿ ಹಜ್ ಯಾತ್ರೆ ಜೀವನದಲ್ಲಿ ಒಂದಾಗಿರುತ್ತದೆ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರಿಗೆ ಹಜ್ ಯಾತ್ರೆ ಕಡ್ಡಾಯ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ವಕ್ಫ್ ಅನುದಾನ

4610 (5368) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 (ಮೂರು) ಸಾಲುಗಳಿಂದ ಮೈಸೂರು ಜಿಲ್ಲೆಯಲ್ಲಿ ಬಿಡುಗಡೆ ಮಾಡಿರುವ ವಕ್ಫ್ ಅನುದಾನ ಎಷ್ಟು? (ತಾಲ್ಲೂಕುವಾರು ಮತ್ತು ವರ್ಷವಾರು ವಿವರ ಕೊಡುವುದು)